ವಸತಿ ಗೃಹಗಳ ನಿರ್ಮಾಣ

87(161); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

(ವಿಧಾನ ಸಭೆ ಸದಸ್ಯರು)

ಅ) ಲಿಂಗಸಗೂರು ತಾಲೂಕಿನಲ್ಲಿ ಸರ್ಕಾರಿ ಪೊಲೀಸ್ ವಸತಿ ಗೃಹಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರವು ಹೊಸದಾಗಿ ವಸತಿ ಗೃಹಗಳನ್ನು ನಿರ್ಮಾಣ ಮಾಡುವುದರ ಬಗ್ಗೆ ಕ್ರಮ ಕೈಗೊಳ್ಳಲಾಗಿದೆಯೇ;

ಇ) ಹಾಗಿದ್ದಲ್ಲಿ ಮರುನಿರ್ಮಾಣಕ್ಕಾಗಿ ಸರ್ಕಾರವು ಅನುದಾನವನ್ನು ನಿಗದಿಪಡಿಸಲಾಗಿದೆಯೇ; (ವಿವರಗಳನ್ನು ಒದಗಿಸುವುದು)?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಲಿಂಗಸಗೂರು ಪೊಲೀಸ್ ಠಾಣೆಯಲ್ಲಿ ದುರಸ್ತಿ/ಶಿಥಿಲಾವಸ್ಥೆಯಲ್ಲಿರುವ 38 ಪೊಲೀಸ್ ವಸತಿ ಗೃಹಗಳನ್ನು 2013–14ನೇ ಸಾಲಿನಲ್ಲಿ ₹ 29.00 ಲಕ್ಷಗಳ ವೆಚ್ಚದಲ್ಲಿ ದುರಸ್ತಿಗೊಳಿಸಲಾಗಿದೆ.

ಮಸ್ಕಿ ಪೊಲೀಸ್ ಠಾಣೆಯಲ್ಲಿ ಶಿಥಿಲಾವಸ್ಥೆಯಲ್ಲಿರುವ 15 ಪೊಲೀಸ್ ವಸತಿ ಗೃಹಗಳನ್ನು 2014–15ನೇ ಸಾಲಿನಲ್ಲಿ ₹ 54,04,000/–ಗಳ ವೆಚ್ಚದಲ್ಲಿ ದುರಸ್ತಿಗೊಳಿಸಲು ಕ್ರಮಕೈಗೊಳ್ಳಲಾಗಿದ್ದು, ದುರಸ್ತಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಆ) ಪೊಲೀಸ್ ಗೃಹ 2020 ಯೋಜನೆಯಡಿಯಲ್ಲಿ ಲಿಂಗಸಗೂರು ತಾಲೂಕಿನ ಲಿಂಗಸಗೂರಿನಲ್ಲಿ 12 ಮಸ್ಕಿಯಲ್ಲಿ 12 ಒಟ್ಟು 24 ವಸತಿಗೃಹಗಳ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಮುದಗಲ್‌ನಲ್ಲಿ 12 ಪೊಲೀಸ್ ವಸತಿಗೃಹಗಳನ್ನು ನಿರ್ಮಾಣ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಇ) ರಾಜ್ಯಾದಂತ 11000 ಪೊಲೀಸ್ ವಸತಿಗೃಹಗಳನ್ನು ₹ 1818.00 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ. ಈ ಯೋಜನೆಗೆ 2013–14ನೇ ಸಾಲಿನಲ್ಲಿ ₹ 20.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. 2014–15 ಸಾಲಿನಲ್ಲಿ ಚಾಲ್ತಿಯಲ್ಲಿರುವ ವಸತಿಗೃಹಗಳ ನಿರ್ಮಾಣ ಯೋಜನೆಗಳಿಗೆ ₹ 70.90 ಕೋಟಿ ನಿಗಧಿಪಡಿಸಿದ್ದು, ಇಲ್ಲಿಯವರೆಗೆ ₹ 35.45 ಕೋಟಿಗಳ ಅನುದಾನವನ್ನು ಬಿಡಗಡೆ ಮಾಡಲಾಗಿದೆ. ಇದರಲ್ಲಿ ಲಿಂಗಸಗೂರು ತಾಲ್ಲೂಕಿನ ಪೊಲೀಸ್ ವಸತಿಗೃಹಗಳ ನಿರ್ಮಾಣ ಕಾಮಗಾರಿಗಳು ಒಳಗೊಂಡಿರುತ್ತವೆ.

ದೇವಸ್ಥಾನಗಳಿಗೆ ಬಿಡುಗಡೆಗೊಳಿಸಿರುವ ಅನುದಾನ

88(162); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) ಪ್ರಸಕ್ತ ಸಾಲಿನಲ್ಲಿ ದೇವಸ್ಥಾನಗಳಿಗೆ ಸರ್ಕಾರವು ನಿಗದಿಪಡಿಸಿರುವ ಅನುದಾನವೆಷ್ಟು ಹಾಗೂ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ಕ್ಷೇತ್ರವಾರು ವಿವರ ನೀಡುವುದು)

ಆ) ಬಿಡುಗಡೆಗೊಳಿಸಲು ಬಾಕಿ ಉಳಿದಿರುವ ಅನುದಾನವೆಷ್ಟು (ವಿವರ ನೀಡುವುದು)

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು)

ಅ) 2014–15ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರವು ದೇವಸ್ಥಾನಗಳ ಅಭಿವೃದ್ಧಿಗಾಗಿ ಒಟ್ಟು ₹ 8020.00 ಲಕ್ಷ ಅನುದಾನ ನಿಗಧಿಪಡಿಸಿರುತ್ತದೆ. ಈವರೆವಿಗೆ ₹ 4398.70 ಲಕ್ಷಗಳ ಅನುದಾನವನ್ನು ಬಿಡಗಡೆ ಮಾಡಲಾಗಿದೆ.